## ಕರ್ನಾಟಕ ಸರ್ಕಾರ

ಸಂಖ್ಯೆ: ಇಎನ್ 145 ವಿಎಸ್‌ಸಿ 2017

ಕರ್ನಾಟಕ ಸರ್ಕಾರದ ಸಚಿವಾಲಯ
2ನೇ ಮಹಡಿ, ವಿಕಾಸ ಸೌಧ,
ಬೆಂಗಳೂರು, ದಿನಾಂಕ: 24-10-2017

Corporate Office, HESCOM
Navanagar, HUBLI.

| | |
|---|---|
| F.A. | |
| G.M.(A) | |
| G.M.(T) | |
| SEE T&P | |
| SEE PMC | |
| PS to MD | |
| PS to DT | |
| TA to DT | |
| AE (C) | |
| H.C. | |
| | D(T) |

1258
26/10/17

ಇಂದ,
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
ಇಂಧನ ಇಲಾಖೆ, ವಿಕಾಸ ಸೌಧ,
ಬೆಂಗಳೂರು.

ಇವರಿಗೆ,
1) ವ್ಯವಸ್ಥಾಪಕ ನಿರ್ದೇಶಕರು, ಬೆಸ್ಕಾಂ/ಸೆಸ್ಕ್/ಮೆಸ್ಕಾಂ/ಹೆಸ್ಕಾಂ/ಜೆಸ್ಕಾಂ.
2) ಮುಖ್ಯ ವಿದ್ಯುತ್ ಪರಿವೀಕ್ಷಕರು.

**ಮಾನ್ಯರೆ,**

**ವಿಷಯ:** ವಿದ್ಯುತ್ ಸರಬರಾಜು ಕಂಪನಿಗಳಲ್ಲಿ 4 ಅಥವಾ 5 star rated ಪರಿವರ್ತಕಗಳನ್ನು ಅಳವಡಿಸುವ ಕುರಿತು.

**ಉಲ್ಲೇಖ:** 1) ಸರ್ಕಾರಿ ಆದೇಶ ಸಂಖ್ಯೆ: ಇಎನ್ 119 ವಿಎಸ್‌ಸಿ 2017, ದಿನಾಂಕ 07-06-2017
2) ಸರ್ಕಾರದ ಇದೇ ಸಮ ಸಂಖ್ಯೆ ಪತ್ರ ದಿನಾಂಕ: 05-08-2017
3) ಸರ್ಕಾರದ ಇದೇ ಸಮ ಸಂಖ್ಯೆ ಪತ್ರ ದಿನಾಂಕ: 17-08-2017

*****

M. D. HESCOM.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ರಾಜ್ಯದ ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿ ದಿನಾಂಕ 01-07-2017 ರಿಂದ ಜಾರಿಗೆ ಬರುವಂತೆ ನಗರ ಪ್ರದೇಶಗಳಲ್ಲಿ 5 star rated ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ 4 star rated ಪರಿವರ್ತಕಗಳನ್ನು ಅಳವಡಿಸಲು ಉಲ್ಲೇಖ (1) ರನ್ವಯ ಆದೇಶ ಹೊರಡಿಸಲಾಗಿತ್ತು.

ಆದರೆ, ಸದರಿ ಆದೇಶವನ್ನು ಪಾಲಿಸಲು ವಿದ್ಯುತ್ ಸರಬರಾಜು ಕಂಪನಿಗಳು ಕಾಲಾವಕಾಶವನ್ನು ಕೋರಿದ್ದು, ಈ ಸಂಬಂಧ ಕಾಲಾವಕಾಶ ವಿಸ್ತರಿಸಿ, ಅಧಿಸೂಚನೆ ಹೊರಡಿಸುವಂತೆ ಕೇಂದ್ರ ಇಂಧನ ಮಂತ್ರಾಲಯಕ್ಕೆ ಕೋರಲಾಗಿತ್ತು.

ಅದರಂತೆ, ಕೇಂದ್ರ ಇಂಧನ ಮಂತ್ರಾಲಯದ ಅಧೀನ ಸಂಸ್ಥೆಯಾದ Bureau of Energy Efficiency ರವರು star rated ವಿತರಣಾ ಪರಿವರ್ತಕಗಳ ಖರೀದಿ ಸಂಬಂಧ ಈಗಾಗಲೇ ಕಾಲಾವಕಾಶ ವಿಸ್ತರಿಸಿ ದಿನಾಂಕ 28-07-2017 ರಂದು ಅಧಿಸೂಚನೆಯನ್ನು ಹೊರಡಿಸಿದ್ದು, ದಿನಾಂಕ 30-06-2017 ರವರೆಗೆ ಖರೀದಿ ಆದೇಶ ನೀಡಲಾಗಿರುವ ಪರಿವರ್ತಕಗಳಿಗೆ ಈ ಹಿಂದೆ ಚಾಲ್ತಿಯಲ್ಲಿದ್ದ ತಾಂತ್ರಿಕ ವಿವರಣೆಗಳಂತೆ ಖರೀದಿಸಬಹುದಾಗಿದೆಯೆಂದು ತಿಳಿಸಿರುತ್ತಾರೆ. ಪತ್ರದ ಪ್ರತಿಯನ್ನು ಲಗತ್ತಿಸಲಾಗಿದೆ.

ಈ ಹಿನ್ನೆಲೆಯಲ್ಲಿ, ದಿನಾಂಕ 30-06-2017 ರವರೆಗೆ ಖರೀದಿ ಆದೇಶ ನೀಡಲಾಗಿರುವ ಪರಿವರ್ತಕಗಳಿಗೆ ಈ ಹಿಂದೆ ಚಾಲ್ತಿಯಲ್ಲಿದ್ದ ತಾಂತ್ರಿಕ ವಿವರಣೆಗಳನ್ನು ಅನುಸರಿಸಬಹುದಾಗಿದ್ದು, ದಿನಾಂಕ 01-07-2017 ರಿಂದ ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳು ದಿನಾಂಕ 07-06-2017 ರ ಉಲ್ಲೇಖ (1) ರಲ್ಲಿರುವ ಕೆಳಕಂಡ ಆದೇಶದಂತೆ ಕಡ್ಡಾಯವಾಗಿ ಜಾರಿಗೊಳಿಸುವಂತೆ ಕೋರಲು ನಿರ್ದೇಶಿತನಾಗಿದ್ದೇನೆ.

**"ದಿನಾಂಕ 01-07-2017 ರಿಂದ ಜಾರಿಗೆ ಬರುವಂತೆ ರಾಜ್ಯಾದ್ಯಂತ ನೂತನವಾಗಿ ಸಂಪರ್ಕ ಪಡೆಯುವ ಸರ್ಕಾರಿ, ಖಾಸಗಿ, ವಾಣಿಜ್ಯ, ಸ್ವಂತ ಹಾಗೂ ಇತರೆ ಬಳಕೆಯ ಎಲ್ಲಾ ವಿದ್ಯುತ್ ಸ್ಥಾವರಗಳಿಗೆ ಗ್ರಾಮೀಣ ಪ್ರದೇಶದಲ್ಲಿ 4 star ಮತ್ತು ನಗರ ಪ್ರದೇಶಗಳ ವ್ಯಾಪ್ತಿಯಲ್ಲಿ 5 star rated ಪರಿವರ್ತಕಗಳನ್ನು ಕಡ್ಡಾಯವಾಗಿ ಅಳವಡಿಸಬೇಕೆಂದು ಆದೇಶಿಸಲಾಗಿದೆ."**

ತಮ್ಮ ವಿಶ್ವಾಸಿ

(ಬಿ.ವಿ.ಶ್ರೀನಿವಾಸಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ
ಇಂಧನ ಇಲಾಖೆ

**ಮೆಮೋ.ಸಂಖ್ಯೆ:ಹುವಿಸಕಂನಿ/ನಿ(ತಾಂ)/2017-18** 1045-3357. **ದಿನಾಂಕ :** 27 OCT 2017

ಪ್ರತಿ ಮಾಹಿತಿಗಾಗಿ ಮತ್ತು ಮೇಲ್ಕಂಡ ಆದೇಶವನ್ನು ಕಟ್ಟುನಿಟ್ಟಾಗಿ ಪಾಲಿಸಲು ಸೂಚಿಸಲಾಗಿದೆ.

1) ಮುಖ್ಯ ಇಂಜನೀಯರ್(ವಿ), ಹುವಿಸಕಂನಿ, ಹುಬ್ಬಳ್ಳಿ / ಬೆಳಗಾವಿ
2) ಎಲ್ಲ ಅಧೀಕ್ಷಕ ಅಭಿಯಂತರರು(ವಿ), ಕಾರ್ಯ ಮತ್ತು ಪಾಲನಾ ವೃತ್ತ, ಹುವಿಸಕಂನಿ.
3) ಪ್ರಧಾನ ವ್ಯವಸ್ಥಾಪಕರು (ತಾಂ), ನಿಗಮ ಕಚೇರಿ, ಹುವಿಸಕಂನಿ.
4) ಅಧೀಕ್ಷಕ ಅಭಿಯಂತರರು(ವಿ), ಪಿ.ಎಮ್.ಸಿ/ಟಿ & ಪಿ. ನಿಗಮ ಕಚೇರಿ, ಹುವಿಸಕಂನಿ.
5) ಎಲ್ಲ ಕಾರ್ಯನಿರ್ವಾಹಕ ಅಭಿಯಂತರರು(ವಿ), ಕಾರ್ಯ ಮತ್ತು ಪಾಲನಾ ವಿಭಾಗ, ಹುವಿಸಕಂನಿ.
6) ಕಾರ್ಯನಿರ್ವಾಹಕ ಅಭಿಯಂತರರು(ವಿ), ಮಾಪಕ ಪರಿವೀಕ್ಷಣಾ ವಿಭಾಗ, ಹುವಿಸಕಂನಿ. ಹುಬ್ಬಳ್ಳಿ / ಬೆಳಗಾಂವಿ
7) ಕಾರ್ಯನಿರ್ವಾಹಕ ಅಭಿಯಂತರರು(ವಿ), ಆಯ್.ಟಿ ಶಾಖೆ ನಿಗಮ ಕಚೇರಿ, ಹುವಿಸಕಂನಿ ಮಾಹಿತಿಗಾಗಿ ಮತ್ತು ಈ ಮಾಹಿತಿಯನ್ನು ಹುವಿಸಕಂನಿ, ಯ ವೆಬ್ ಸೈಟ್ ನಲ್ಲ ಪ್ರಕಟಿಸುವುದು.
8) ಮಹಾಕಡತ / ಕಚೇರಿ ಪ್ರತಿ.

**ನಿರ್ದೇಶಕರು (ತಾಂತ್ರಿಕ)**
**ಹುವಿಸಕಂನಿ ಹುಬ್ಬಳ್ಳಿ**